# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.16/2025

Pw-07

Cw-08

ಸಾಕ್ಷಿದಾರರ ಹೆಸರುಃ ಶ್ರೀಮತಿ ಗೀತಾ ಗೋಣೆಪ್ಪನವರ

ತಂದೆಃಗಂಡನ ಹೆಸರುಃ ಶ್ರೀ ಚಂದ್ರಪ್ಪ

ವಯಸ್ಸುಃ 40 ವರ್ಷ

ಉದ್ಯೋಗಃ ಮನೆ ಕೆಲಸ

ವಾಸ ಸ್ಥಳಃ ಕೋಡಿಯಾಲ-ಹೊಸಪೇಟೆ, ತಾಃ ರಾಣೇಬೆನ್ನೂರು

**ದಿನಾಂಕ:22.04.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1. ಚಾಸಾ-1 ಮತ್ತು 4 ನನ್ನ ಮಕ್ಕಳು. ಆರೋಪಿತರು ನನಗೆ ಗೊತ್ತು. ನಾವು ಹಿಂದೂ ವಾಲ್ಮೀಕಿ ಜಾತಿಗೆ ಸೇರಿರುತ್ತೇವೆ. ಆರೋಪಿತರು ಹಿಂದೂ ಬಾರ್ಕಿ ಜಾತಿಗೆ ಸೇರಿರುತ್ತಾರೆ. ಈ ಘಟನೆ ನಡೆಯುವ 9 ತಿಂಗಳ ಹಿಂದೆ 1 ನೇ ಆರೋಪಿ ಮತ್ತು ಚಾಸಾ-4 ರವರ ನಡುವೆ ಹಿರೇಕೆರೂರು ದೇವಸ್ಥಾನದಲ್ಲಿ ಮದುವೆಯಾಗಿತ್ತು. ಸದರಿ ವಿಚಾರ ನನಗೆ ಅವರಿಬ್ಬರ ಮದುವೆಯಾದ 3 ತಿಂಗಳ ಬಳಿಕ ಗೊತ್ತಾಯಿತು. ಆಗ ನಾನು ಮತ್ತು ನಮ್ಮ ಹಿರಿಯರು ಸೇರಿಕೊಂಡು ನನ್ನ ಮಗಳಿಗೆ ನೀನು 1 ನೇ ಆರೋಪಿ ಜೊತೆ ಮದುವೆಯಾಗಿದ್ದೀಯಾ, ಆದ ಕಾರಣ ನೀನು ಆತನ ಜೊತೆ ಹೋಗಿ ಮದುವೆ ಜೀವನ ನಡೆಸು ಎಂದು ಹೇಳಿದ್ದೆವು. ಅದಕ್ಕೆ ಚಾಸಾ-4 ರವರು ನಾನು 1 ನೇ ಆರೋಪಿ ಜೊತೆ ಹೋಗುವುದಿಲ್ಲ ಎಂದು ಹೇಳಿದಳು. ಆಗ ನಾನು ಏಕೆ ಎಂದು ನನ್ನ ಮಗಳನ್ನು ಕೇಳಿದೆನು. ಅದಕ್ಕೆ ನನ್ನ ಮಗಳು ಚಾಸಾ-4 ರವರು 1 ನೇ ಆರೋಪಿಯ ಚಿಕ್ಕಪ್ಪನಾದ ಚಿಕ್ಕಪ್ಪನು ಮತ್ತು ಆತನ ಚಿಕ್ಕಮ್ಮನಾದ ಲಕ್ಷ್ಮಿ ಇವರು ಮತ್ತು ಇನ್ನೊಬ್ಬ ಚಿಕ್ಕಪ್ಪನಾದ ಪ್ರಕಾಶ ಇವರು ಬೇಡಾ ಎಂದು ಹೇಳಿದ್ದಾರೆಂದು ತಿಳಿಸಿದಳು.

2. 1 ನೇ ಆರೋಪಿಯು ನನ್ನ ಮಗಳು ಚಾಸಾ-4 ರವರಿಗೆ ಕೆಟ್ಟ-ಕೊಳಕ ಮೆಸೇಜ್ ಗಳನ್ನು ಆಕೆಯ ಮೊಬೈಲ್ ಗೆ ಕಸುಹಿಸುತ್ತಿದ್ದನು. ಆದ ಕಾರಣ ನನ್ನ ಮಗಳು 1 ನೇ ಆರೋಪಿ

ಜೊತೆ ನಾನು ಹೋಗುವುದಿಲ್ಲ ಎಂದು ಹೇಳಿದಳು. ನಂತರ 1 ನೇ ಆರೋಪಿಯು ನನ್ನ ಮಗಳು ಚಾಸಾ–4 ರವರಿಗೆ ನೀನು ನನಗೆ ಬೇಡಾ ಆದ ಕಾರಣ ನೀನು ಡೈವೋರ್ಸ ಕೊಡು ಎಂದು ಕೇಳಿದನು. ಆಗ ನಾನು ಮತ್ತು ನನ್ನ ಮಗಳು ಚಾಸಾ–4 ರವರು ನಮ್ಮ ವಕೀಲರ ಹತ್ತಿರ ಹೋಗಿ ವಿವಾಹ ವಿಚ್ಛೇಧನದ ಬಗ್ಗೆ ವಿಚಾರಿಸಿದಾಗ ಮದುವೆಯಾಗಿ ಒಂದು ವರ್ಷ ಮುಗಿಯುವತನಕ ವಿವಾಹ ವಿಚ್ಛೇಧನ ಸಿಗುವುದಿಲ್ಲ ಎಂದು ಹೇಳಿದರು. ಆಗ ನಾನು ಮತ್ತು ಮಗಳು ಮನೆಯಲ್ಲಿಯೇ ಇದ್ದೆವು.

3. ಈಗ್ಗೆ ಒಂದು ವರ್ಷದ 02 ತಿಂಗಳ ಹಿಂದೆ ರಾತ್ರಿ 08.00 ಗಂಟೆಗೆ ನಾನು, ನನ್ನ ಗಂಡ ಮತ್ತು ಚಾಸಾ–4 ರವರು ಒಟ್ಟಿಗೆ ನಮ್ಮೂರಿನ ಕವಲೆತ್ತು ಮಾರ್ಗದ ದುರ್ಗಮ್ಮ ದೇವಸ್ಥಾನಕ್ಕೆ ಪೂಜೆಗೆ ಹೋಗಿದ್ದೆವು. ಆ ಕಾಲಕ್ಕೆ ನಮ್ಮ ಮನೆಯಲ್ಲಿ ನನ್ನ ಚಿಕ್ಕ ಮಗಳಾದ ಚಾಸಾ–1 ಮತ್ತು ನನ್ನ ಮಾವನಾದ ಚಾಸಾ–5 ಇದ್ದರು. ನಂತರ ನಾವು ರಾತ್ರಿ 8.30–9.00 ಗಂಟೆ ಸಮಯಕ್ಕೆ ದೇವಸ್ಥಾನದಿಂದ ಮನೆಗೆ ಬಂದೆವು. ಆಗ ನನ್ನ ಚಿಕ್ಕ ಮಗಳಾದ ಚಾಸಾ–1 ರವಳು ಮನೆಯಲ್ಲಿ ಅಳುತ್ತಿದ್ದಳು. ಆಗ ನಾನು ಪಿರ್ಯಾದಿಗೆ ಏಕೆ ಅಳುತ್ತಿದ್ದೀಯಾ ಎಂದು ಕೇಳಿದೆನು. ಆಗ ಚಾಸಾ–1 ರವರು ನನಗೆ ಈಗ ಸ್ವಲ್ಪ ಸಮಯದ ಹಿಂದೆ ಮನೆಯ ಮುಂದೆ ಒಂದು ಮೆರವಣಿಗೆ ಹೋಯಿತು ಎಂದು ನನಗೆ ಹೇಳಿದಳು. ಚಾಸಾ–1 ರವರು ಮುಂದುವರೆದು ಅಕ್ಷತಾ ಮಿಂಡ್ರಿಗಾಳಿ ಎಲ್ಲಿದ್ದಾಳೆ ಎಂದು 1 ನೇ ಆರೋಪಿಯು ನನ್ನನ್ನು ಕೇಳಿ ನಿನ್ನ ಅಕ್ಕನ ಬಾಳು ಹಾಳು ಮಾಡಿದ ರೀತಿಯಲ್ಲಿಯೇ ನಿನ್ನ ಬಾಳು ಸಹ ಹಾಳುಮಾಡುತ್ತೇನೆಂದು ಹೇಳಿದನು ಎಂದು ನನ್ನ ಮಗಳು ನನಗೆ ಹೇಳಿದಳು.

4. 1 ನೇ ಆರೋಪಿಯು ನನ್ನ ಕೈ ಹಿಡಿದು ಮನೆಯಿಂದ ಹೊರಗೆ ಎಳೆದುಕೊಂಡು ಬಂದು ತಳವಾರ ಮಿಂಡ್ರಿ ಹುಟ್ಟಿದವರು, ಎಷ್ಟು ಜನ ಇದ್ದೀರಿ ಬನ್ನಿರಿ ಎಂದು ಹೇಳಿದು ಎಂದು ನನ್ನ ಮಗಳು ನನಗೆ ಹೇಳಿದಳು. 1 ನೇ ಆರೋಪಿಯು ನಿಮ್ಮ ಅಜ್ಜ ಮತ್ತು ಅಭಿಷೇಕ ಬಂದಿದ್ದಾರೆಂದು ಬಿಟ್ಟಿರುತ್ತೇವೆ ಇಲ್ಲದಿದ್ದರೆ ನಿಮಗೆ ಏನು ಮಾಡುಬೇಕಾಗಿದೆ ಅದನ್ನು ಮಾಡುತ್ತಿದ್ದೆ ಎಂದು ಹೇಳಿದನು ಎಂದು ನನ್ನ ಮಗಳು ನನಗೆ ತಿಳಿಸಿದಳು.

5. ನಂತರ ನಾನು, ನನ್ನ ಗಂಡ ಮತ್ತು ಚಾಸಾ–1 ರವರು ಸೇರಿಕೊಂಡು 1 ನೇ ಆರೋಪಿಯ ವಿರುದ್ಧ ದೂರು ಕೊಡಲು ಕುಮಾರ ಪಟ್ಟಣಂ ಪೊಲೀಸ್ ಠಾಣೆಗೆ ಹೊರಟೆವು.

ಆಗ ಮನೆಯಲ್ಲಿ ಚಾಸಾ–4 ಮತ್ತು 5 ರವರು ಇದ್ದರು. ಆಗ ಚಾಸಾ–4 ರವರು ಅಳುತ್ತಾ ಪೋನ್ ಮಾಡಿ ನಾಗವ್ವ, ಚಿಕ್ಕಪ್ಪ, ಲಕ್ಷ್ಮಿ, ನವನೀತ, ವಿಜಯಕುಮಾರ ಮತ್ತು ಪುನೀತ ನನ್ನನ್ನು ಮನೆಯಿಂದ ಹೊರಗೆ ಎಳೆದುಕೊಂಡು ಬಂದು ಏ ತಳವಾರ ಮಿಂಡ್ರಿ ಮಾಡುಕೊಳ್ಳುವ ತನಕ ಮಾಡಿಕೊಂಡು ಬಾಳ್ವೆ ಮಾಡಲು ಬರುತ್ತಿಲ್ಲ ಎಂದು ಬೈದನು ಎಂದು ನನಗೆ ತಿಳಿಸಿದಳು. ಆರೋಪಿ ಲಕ್ಷ್ಮೀ ಇಟ್ಟಿಗೆ ತೆಗೆದುಕೊಂಡು ನನ್ನ ಮೂಗಿಗೆ ಜಜ್ಜಿರುತ್ತಾಳೆಂದು ನನ್ನ ಮಗಳು ಚಾಸಾ–4 ರವರು ನನಗೆ ಹೇಳಿದಳು. ಆಗ ಓಲೇಕಾರ ಸಿದ್ದಪ್ಪ ಬಂದು ಜಗಳ ಬಿಡಿಸಿದರು ಎಂದು ನನ್ನ ಮಗಳು ಚಾಸಾ–4 ರವರು ನನಗೆ ಹೇಳಿದಳು.

6. ನಂತರ ಪೊಲೀಸ್ ಠಾಣೆಗೆ ಹೋಗಿದ್ದ ನಾನು, ಚಾಸಾ–1 ಮತ್ತು 9 ರವರು ನಮ್ಮ ಮನೆಗೆ ವಾಪಸ್ ಬಂದೆವು. ನಾನು ಮನೆಯಲ್ಲಿದ್ದ ನನ್ನ ಮಗಳಾದ ಚಾಸಾ–4 ರವರನ್ನು ನೋಡಲಾಗಿ ಆಕೆಗೆ ಮೂಗಿಗೆ ಪೆಟ್ಟಾಗಿ ಉಸಿರಾಟದ ತೊಂದರೆ ಉಂಟಾಗಿತ್ತು. ನಂತರ ನಾನು ಚಾಸಾ–1 ಮತ್ತು 4 ರವರನ್ನು ಕರೆದುಕೊಂಡು ಹರಿಹರದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆ ಕೊಡಿಸಲು ಹೋದೆನು. ನಂತರ ಕುಮಾರಪಟ್ಟಣಂ ಪೊಲೀಸ್ ಠಾಣೆಗೆ ಹೋಗಿ ನನ್ನ ಮಗಳು ಚಾಸಾ–1 ಆರೋಪಿಗಳ ವಿರುದ್ಧ ದೂರನ್ನು ದಾಖಲುಮಾಡಿರುತ್ತಾಳೆ.

7. ದೂರು ಕೊಟ್ಟ ಮರು ದಿನ ನನ್ನ ಮಗಳು ಚಾಸಾ–4 ರವರನ್ನು ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಹೆಚ್ಚಿನ ಚಿಕಿತ್ಸೆ ಕೊಡಿಸಿರುತ್ತೇನೆ. ಘಟನೆಯ ವಿಚಾರವಾಗಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

**ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಪಿ.ಸಿ.ಬಿ. ವಕೀಲರಿಂದಃ**

8. ನಮ್ಮ ಮನೆಯ ಸುತ್ತ–ಮುತ್ತ ಬೇರೆ ಜನರು ವಾಸಮಾಡುವ ಮನೆಗಳು ಇರುತ್ತವೆ ಎಂದರೆ ನಿಜ. ನಮ್ಮ ಮನೆಗೂ ನಾವು ಹೋಗಿದ್ದ ದೇವಸ್ಥಾನಕ್ಕೂ ½ ಕಿ.ಮೀ ಅಂತರ ಇರುತ್ತದೆ ಎಂದರೆ ಸರಿಯಲ್ಲ. ಆದರೆ 02 ಕಿ.ಮೀ ಅಂತರ ಇರುತ್ತದೆ. ನಮ್ಮ ಮನೆಯಿಂದ ದೇವಸ್ಥಾನಕ್ಕೆ ನಡೆದುಕೊಂಡು ಹೋಗಿ ಬರಲು 01 ಗಂಟೆ ಸಮಯ ಬೇಕಾಗುತ್ತದೆ ಎಂದರೆ ಸಾಕ್ಷಿಯು ನಾವು ಬೈಕಿನಲ್ಲಿ ಹೋಗಿದ್ದೆವು ಎಂದು ನುಡಿದಿರುತ್ತಾರೆ. ನಮ್ಮ ಮನೆಯಿಂದ ದೇವಸ್ದಾನಕ್ಕೆ ಬೈಕಿನಲ್ಲಿ ಹೋಗಿ ಬರಲು 45 ನಿಮಿಷ ಬೇಕಾಗುತ್ತದೆ ಎಂದರೆ ಸರಿಯಲ್ಲ. ಆದರೆ 01 ಗಂಟೆ ಬೇಕಾಗುತ್ತದೆ. ನಾವೆಲ್ಲರೂ ದೇವಸ್ದಾನದಿಂದ ನಮ್ಮ ಮನೆಗೆ ಬಂದಾಗ ರಾತ್ರಿ 8.30

ಗಂಟೆಯಾಗಿತ್ತು. ಆಗ ನಾವು ಮನೆಯಲ್ಲಿ ಒಂದು ತಾಸು ಇದ್ದೆವು. ಸದರಿ ಒಂದು ತಾಸಿನ ಅವಧಿಯಲ್ಲಿ ನಾನಾಗಲೀ ಅಥವಾ ನಮ್ಮ ಮನೆಯವರಾಗಲೀ ಘಟನೆಯ ಬಗ್ಗೆ ಪೊಲೀಸರಿಗೆ ತಿಳಿಸಿರುವುದಿಲ್ಲ.

9. ನಾನು ಮತ್ತು ನನ್ನ ಮಗಳು ಚಾಸಾ–1 ರವರು ಹಾಗೂ ನನ್ನ ಗಂಡ ಪೊಲೀಸ್ ಠಾಣೆಗೆ ಹೋಗುವಾಗ ರಾತ್ರಿ 9.00 ಗಂಟೆಯಾಗಿತ್ತು. ನಾವು ಪೊಲೀಸ್ ಠಾಣೆಗೆ ಹೋಗುವಾಗ ಮನೆಯಲ್ಲಿದ್ದ ಚಾಸಾ–4 ರವರ ಜೊತೆ ಯಾರನ್ನೂ ಸಹ ಬಿಟ್ಟು ಹೋಗಿರಲಿಲ್ಲ. ಸಾಕ್ಷಿಯು ಮುಂದುವರೆದು ನನ್ನ ಮಾವನನ್ನು ಬಿಟ್ಟು ಹೋಗಿದ್ದೆ ಎಂದು ನುಡಿದಿರುತ್ತಾರೆ. ನಮ್ಮ ಮನೆಗೂ ಮತ್ತು ಪೊಲೀಸ್ ಠಾಣೆಗೂ ½ ಕಿ.ಮೀ ಅಂತರ ಇರುತ್ತದೆ ಎಂದರೆ ನಿಜ. ನಾವೆಲ್ಲರೂ ನಮ್ಮ ಮನೆಯಿಂದ ಪೊಲೀಸ್ ಠಾಣೆಗೆ ಬೈಕಿನಲ್ಲಿ ಹೋದೆವು. ನಾವೆಲ್ಲರೂ ಪೊಲೀಸ್ ಠಾಣೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ನಾವು ಪೊಲೀಸ್ ಠಾಣೆಯನ್ನು ಮುಟ್ಟುವಷ್ಟರಲ್ಲಿ ನಮ್ಮ ಮನೆಯಿಂದ ಕರೆ ಬಂದ ಕಾರಣ ವಾಪಸ್ ಬಂದೆವು. ಆಗ ಅಂದಾಜು ಸಮಯ 9.30 ಗಂಟೆಯಾಗಿತ್ತು.

10. ನಾವು ನಮ್ಮ ಮನೆಗೆ ಬಂದಾಗ ಬೇರೆ ಜನರು ಅಲ್ಲಿ ಇರಲಿಲ್ಲ. ನಾವು ಆಸ್ಪತ್ರೆಗೆ ಹೋದಾಗ ಸಮಯ ಎಷ್ಟಾಗಿತ್ತು ಎಂದು ನನಗೆ ಗೊತ್ತಿಲ್ಲ. ನಾವು ಆಸ್ಪತ್ರೆಗೆ ಹೋಗುವ ಪೂರ್ವದಲ್ಲಿ ಘಟನೆಯ ಬಗ್ಗೆ ಪೊಲೀಸರಿಗೆ ತಿಳಿಸಲು ಪ್ರಯತ್ನ ಪಡಲಿಲ್ಲ. ಹರಿಹರ ಆಸ್ಪತ್ರೆಯವರು ನಿಮ್ಮ ಮಗಳಿಗೆ ಬಹಳ ತೊಂದರೆ ಇದೆ ಬೇರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಎಂದು ಹೇಳಿರುತ್ತಾರೆ. ಆಗ ನಾವು ತಕ್ಷಣ ನನ್ನ ಮಗಳನ್ನು ದಾವಣಗೆರೆ ಆಸ್ಪತ್ರೆಗೆ ಕರೆದುಕೊಂಡು ಹೋಗಲಿಲ್ಲ. ನಾವು ಹರಿಹರ ಆಸ್ಪತ್ರೆಗೆ ಹೋದಾಗ ಪೊಲೀಸರು ಸ್ಥಳಕ್ಕೆ ಬಂದು ನೋಡಿಕೊಂಡು ಹೋಗಿರುತ್ತಾರೆ. ಆಗ ಪೊಲೀಸರು ನಮಗೆ ಫೋನ್ ಮಾಡಿ ನಮ್ಮನ್ನು ವಿಚಾರಣೆ ಮಾಡಲಿಲ್ಲ.

11. ದವಾಖಾನೆಯಿಂದ ಬಂದ ನಂತರ ಪೊಲೀಸ್ ಠಾಣೆಗೆ ಹೋದಾಗ ಎಷ್ಟು ಗಂಟೆಯಾಗಿತ್ತು ಎಂದು ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಗೆ ಹೋದಾಗ ಎಷ್ಟು ಸಹಿ ಮಾಡಿದ್ದೇವೆ ಎಂದು ನೆನಪಿಲ್ಲ. ನಾವೆಲ್ಲರೂ ಪೊಲೀಸ್ ಠಾಣೆಯಲ್ಲಿ 3–4 ತಾಸು ಇದ್ದೆವು. ಆಗ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆನು. ಯಾವ ಪೊಲೀಸ್ ಅಧಿಕಾರಿ ನನ್ನ

ಹೇಳಿಕೆ ಬರೆದುಕೊಂಡರು ಎಂದು ನನಗೆ ನೆನಪಿಲ್ಲ.

12. 1 ನೇ ಆರೋಪಿಯ ಚಿಕ್ಕಪ್ಪ ಮತ್ತು ಚಿಕ್ಕಮ್ಮ ನನ್ನ ಮಗಳ ಜೊತೆ ಬಾಳ್ವೆ ಮಾಡಬೇಡಾ ಎಂದು ಹೇಳಿದ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮಗಳನ್ನು ದಾವಣಗೆರೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋದ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ನಾನು ಸದರಿ ವಿಚಾರವನ್ನೂ ಸಹ ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

13. 1 ನೇ ಆರೋಪಿ ಮತ್ತು ಚಾಸಾ-4 ರವರು ಸುಮಾರು 3-4 ವರ್ಷಗಳಿಂದ ಪರಸ್ಪರ ಪ್ರೀತಿ ಮಾಡುತ್ತಿದ್ದರು ಎಂದರೆ ನಿಜ. ಸದರಿ ವಿಚಾರ ನಮಗೆ ಗೊತ್ತಾದ ನಂತರ ನಾನು 1 ನೇ ಆರೋಪಿ ಮತ್ತು ಚಾಸಾ-4 ರವರಿಗೆ ಪ್ರೀತಿ ಮಾಡಬೇಡಿರಿ ಎಂದು ಬುದ್ದಿವಾದ ಹೇಳಿರುತ್ತೇನೆ. ನನ್ನ ಮಗಳು ಚಾಸಾ-4 ರವರು 1 ನೇ ಆರೋಪಿ ಜೊತೆ ಮದುವೆಯಾಗಬಾರದು ಎಂದು ನನ್ನ ಮನಸ್ಸಿನಲ್ಲಿತ್ತು ಎಂದರೆ ಸರಿಯಲ್ಲ. ನಾನು ನನ್ನ ಮಗಳಿಗೆ 1 ನೇ ಆರೋಪಿ ಜೊತೆ ನೀನು ಹೋಗಬೇಡಾ ಎಂದು ನಿರ್ಬಂಧ ಮಾಡಿರುತ್ತೇನೆ. ನಾನು ವಿರೋಧ ಮಾಡಿದ್ದರಿಂದಲೇ 1 ನೇ ಆರೋಪಿ ಮತ್ತು ನನ್ನ ಮಗಳು ಚಾಸಾ-4 ರವರು ಹಿರೇಕೆರೂರು ಉಪ ನೋಂದಣಾಧಿಕಾರಿಗಳ ಕಚೇರಿಗೆ ಹೋಗಿ ಮದುವೆ ಮಾಡಿಕೊಂಡು ಬಂದರು ಎಂದರೆ ನಿಜ. ಮದುವೆಯಾದ ನಂತರ ನನ್ನ ಮಗಳು ಮತ್ತು 1 ನೇ ಆರೋಪಿ ಸಾಂಸಾರಿಕ ಜೀವನವನ್ನು ನಡೆಸಿಲ್ಲ ಎಂದರೆ ನಿಜ.

14. ನಂತರ ನನಗೆ 1 ನೇ ಆರೋಪಿಗೆ ತಂದೆ, ತಾಯಿ ಇಲ್ಲ ಮತ್ತು ಯಾವುದೇ ಆಸ್ತಿ ಇಲ್ಲ ಎಂದು ತಿಳಿದು ಬಂತು ಎಂದರೆ ಸರಿಯಲ್ಲ. ನಂತರ ನಾನು ಮತ್ತು ಹಿರಿಯರೆಲ್ಲರೂ ಸೇರಿಕೊಂಡು ಚಾಸಾ-4 ಮತ್ತು 1 ನೇ ಆರೋಪಿ ಬಾಳ್ವೆ ಮಾಡಬಾರದು ಎಂದು ವಿವಾಹ ವಿಚ್ಛೇಧನ ಕೊಡಿಸಬೇಕೆಂದು ತೀರ್ಮಾನ ಮಾಡಿದ್ದೆವು ಎಂದರೆ ಸರಿಯಲ್ಲ. ನನ್ನ ಮಗಳು ಚಾಸಾ-4 ರಾಣೇಬೆನ್ನೂರು ನ್ಯಾಯಾಲಯದಲ್ಲಿ 1 ನೇ ಆರೋಪಿಯ ವಿರುದ್ಧ ವಿವಾಹ ವಿಚ್ಛೇಧನಕ್ಕಾಗಿ ಅರ್ಜಿ ಸಲ್ಲಿಸಿದ್ದಾಳೆ ಎಂದರೆ ನಿಜ. ನನಗೆ ಈಗಲೂ ಸಹ ನನ್ನ ಮಗಳನ್ನು 1 ನೇ

ಆರೋಪಿಯ ಜೊತೆ ಹೋಗಿ ಸಂಸಾರ ಮಾಡಲು ಕಳಿಸಿಕೊಡಲು ಇಷ್ಟವಿಲ್ಲದ ಕಾರಣ ವಿವಾಹ ವಿಚ್ಛೇಧನಕ್ಕೆ ಅರ್ಜಿ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

15. ನಾನು, 1 ನೇ ಆರೋಪಿ, ನಮ್ಮ ಹಿರಿಯರು ಮತ್ತು 1 ನೇ ಅರೋಪಿಯ ಹಿರಿಯರಲ್ಲರೂ ಸೇರಿಕೊಂಡು ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಲು ವಕೀಲರನ್ನು ಭೇಟಿಯಾಗಿದ್ದೆವು ವಿಂದರೆ ನಿಜ. ಆಗ ವಕೀಲರು ಮದುವೆಯಾಗಿ ಒಂದು ವರ್ಷವಾಗದ ಕಾರಣ ಈಗಲೇ ವಿವಾಹ ವಿಚ್ಛೇನಕ್ಕೆ ಅರ್ಜಿ ಸಲ್ಲಿಸಲು ಬರುವುದಿಲ್ಲ ಎಂದು ಹೇಳಿದರು ಎಂದರೆ ನಿಜ. ಆಗ 1 ನೇ ಆರೋಪಿಯು ನನ್ನ ಮಗಳಿಗೆ ವಿವಾಹ ವಿಚ್ಛೇದನ ಕೊಡವುವುದಿಲ್ಲ ಎಂದು ಹೇಳಿದನು.

16. ನಾನು ಪೊಲೀಸರ ಮುಂದೆ ಕೊಟ್ಟ ನನ್ನ ಹೇಳಿಕೆಯಲ್ಲಿ ಈಗ ನನಗೆ ಓದಿ ಹೇಳಿದಂತೆ "ನಂತರ ನಾವು ವಕೀಲರನ್ನು ಸಂಪರ್ಕಿಸಿ ಡೈವರ್ಸ ಬಗ್ಗೆ ವಿಚಾರಿಸಿದಾಗ ಮದುವೆಯಾಗಿ 1 ವರ್ಷ ಆಗ ಬೇಕು ಆ ನಂತರ ಡೈವರ್ಸ ಅರ್ಜಿ ಹಾಕಲು ಬರುತ್ತದೆ ಅಂತಾ ತಿಳಿಸಿದರು ಇದರಿಂದ ನಾವು ಸುಮ್ಮನಿದ್ದೆನು" ಎಂದು ಹೇಳಿರುತ್ತೇನೆ. ನಂತರ ನಮ್ಮ ಮತ್ತು 1 ನೇ ಆರೋಪಿಯ ನಡುವೆ ವಿವಾಹ ವಿಚ್ವೇಧನಕ್ಕಾಗಿ ಯಾವುದೇ ಮಾತುಕತೆಯಾಗಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮಧ್ಯಾಹ್ನದ ಭೋಜನ ವಿರಾಮವಾದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 2.45 ಗಂಟೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.

**ದಿನಾಂಕ:22.04.2026 ರಂದು ಸಂಜೆ 4.40 ಗಂಟೆಗೆ ಸಾಕ್ಷಿಯನ್ನು ಕರೆಸಿ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ರಿಂದ 7 ನೇ ಆರೋಪಿತರ ಪರವಾಗಿ ಶ್ರೀ ಪಿ.ಸಿ.ಬಿ. ವಕೀಲರಿಂದಃ**

17. ನಾನು ಈ ಹಿಂದೆ ಸರ್ಕಾರಿ ಪ್ರೌಢಶಾಲೆಯಲ್ಲಿ ಬಿಸಿಯೂಟದ ಯೋಜನೆಯಡಿಯಲ್ಲಿ ಅಡಿಗೆ ಕೆಲಸವನ್ನು ಮಾಡುತ್ತಿದ್ದೆ ಎಂದರೆ ನಿಜ. ಸದರಿ ಕೆಲಸದಿಂದ ನನ್ನನ್ನು ತೆಗೆದು ಹಾಕಿದರು ಎಂದರೆ ಸರಿಯಲ್ಲ. ಆದರೆ ನಾನೇ ಕೆಲಸ ಬಿಟ್ಟಿರುತ್ತೇನೆ. ಬಿಸಿಯೂಟದ ಯೋಜನೆಯಡಿಯಲ್ಲಿ ಸರ್ಕಾರದವರು ಶಾಲೆಗೆ ಕೊಟ್ಟಂತಹ ಅಡಿಗೆ ಪ್ರದಾರ್ಥಗಳನ್ನು ನಾನು ದುರುಪಯೋಗಪಡಿಸಿಕೊಂಡ ಕಾರಣ ನನ್ನನ್ನು ಕೆಲಸದಿಂದ ತೆಗೆದು ಹಾಕಿರುತ್ತಾರೆಂದರೆ ಸರಿಯಲ್ಲ.

18. ನನಗೆ ನಮ್ಮೂರಿನ CDH ಇಟ್ಟಿಗೆ ಮಾಲೀಕರಾದ ಬಸವಣ್ಣೆಪ್ಪ ರವರು ಪರಿಚಯ ಇದೆ ಎಂದರೆ ನಿಜ. ನಾನು ಮತ್ತು ಸದರಿ ಬಸವಣ್ಣೆಪ್ಪ ಶಾಮೀಲಾಗಿ ಆರೋಪಿಗಳ ವಿರುದ್ಧ ಸುಳ್ಳು ಕೇಸನ್ನು ಹಾಕಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿಗೆ ಆಸ್ತಿ ಇಲ್ಲದ ಕಾರಣ ನಾನು ಆತನಿಗೆ ಯಾವಾಗಲೂ ನನ್ನ ಮಗಳಿಗೆ ವಿವಾಹ ವಿಚ್ಛೇದನ ಕೊಡು ಎಂದು ಒತ್ತಾಯಮಾಡುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಚಾಸಾ-4 ರವರ ನಡುವಿನ ವಿವಾಹ ವಿಚ್ಛೇದನ ಸಲುವಾಗಿ ಪೊಲೀಸ್ ಠಾಣೆಯಲ್ಲಿ ಹಲವಾರು ಬಾರಿ ರಾಜೀ ಸಂಧಾನ ಮಾತುಕತೆಯಾಗಿದ್ದವು ಎಂದರೆ ನಿಜ. ಆಗ 1 ನೇ ಆರೋಪಿ ಮತ್ತು ಮನೆಯವರನ್ನು ಹಾಗೂ ಅವರ ಸಂಬಂಧಿಕರನ್ನು ಪೊಲೀಸ್ ಠಾಣೆಯಲ್ಲಿ ಸಾಕಷ್ಟು ಸಲ ಕೂರಿಸಿದ್ದರು ಎಂದರೆ ನನಗೆ ಗೊತ್ತಿಲ್ಲ.

19. ನನ್ನ ಮಾವ ಭೀಮಪ್ಪ ಮತ್ತು ನನ್ನ ಅತ್ತೆ ರೇಣುಕಮ್ಮ ನಮ್ಮನ್ನು ಮತ್ತು ನಮ್ಮ ಮಕ್ಕಳನ್ನು ಬಿಟ್ಟು ಬೇರೆ ಕಡೆ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ಅತ್ತೆ ಮತ್ತು ಮಾವನ ಮನೆಯನ್ನು ಬೇರೆಯವರಿಗೆ ಬಾಡಿಗೆ ಕೊಟ್ಟು ಸದರಿ ಬಾಡಿಗೆ ಹಣವನ್ನು ನಾನೇ ವಸೂಲಿ ಮಾಡಿಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನಮ್ಮ ಅತ್ತೆ, ಮಾವನಿಗೆ ತೊಂದರೆ ಕೊಟ್ಟು ಅವರು ಬಾಡಿಗೆ ಮನೆಯಲ್ಲಿರುವಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ.

20. ಈ ಪ್ರಕರಣದ ಚಾಸಾ–7 ರವರು ರೆಡ್ಡಿ ಜನಾಂಗಕ್ಕೆ ಸೇರಿರುತ್ತಾರೆ ಎಂದರೆ ನಿಜ. ಚಾಸಾ–7 ರವರು ನಮ್ಮ ಸಂಬಂಧಿಕರಾದ ಕೀರ್ತನಾ ಎಂಬ ಹುಡುಗಿಯನ್ನು ಮದುವೆಯಾಗಿದ್ದಾರೆ ಎಂದರೆ ನಿಜ. ಸದರಿ ಕೀರ್ತನಾ ಅಭಿ ಎಂಬ ಹುಡುಗನನ್ನು ಪ್ರೀತಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ.

21. 1 ನೇ ಆರೋಪಿ ಮತ್ತು 2 ರಿಂದ 7 ನೇ ಆರೋಪಿತರು ಬೇರೆ–ಬೇರೆ ವಾಸ ಮಾಡುತ್ತಿದ್ದಾರೆ ಎಂದರೆ ನಿಜ. 1 ನೇ ಆರೋಪಿ ನನ್ನ ಮಗಳನ್ನು ಪ್ರೀತಿ ಮಾಡಿ ಮದುವೆ ಮಾಡಿಕೊಂಡಿರುವ ವಿಚಾರಕ್ಕೂ ಮತ್ತು 2 ರಿಂದ 7 ನೇ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

22. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ 1 ನೇ ಆರೋಪಿಯು ನಮ್ಮ ಮನೆ ಹತ್ತಿರ ಬಂದಿಲ್ಲ ಮತ್ತು ಚಾಸಾ–1 ರವರಿಗೆ ಯಾವುದೇ ರೀತಿಯಿಂದ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ಉಳಿದ ಆರೋಪಿತರು ಚಾಸಾ–4 ರವರಿಗೆ ಬೈದಿಲ್ಲ ಮತ್ತು ಹಲ್ಲೆ ಮಾಡಿಲ್ಲ ಹಾಗೂ ಪ್ರಾಣ ಬೆದರಿಕೆ ಹಾಕಿಲ್ಲ ಹಾಗೂ ಜಾತಿ ನಿಂದನೆ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೆ ಆಸಿತ ಇಲ್ಲದ ಕಾರಣ ಮತ್ತು ನನ್ನ ಮಗಳಿಗೆ ಆತನಿಂದ ವಿವಾಹ ವಿಚ್ಛೇದನ ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದೂರು ಕೊಡಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

23. 1 ರಿಂದ 7 ನೇ ಆರೋಪಿಗಳು ಬಂದು ನನ್ನ ಮಗಳು ಚಾಸಾ–4 ರವರಿಗೆ ಬೈದು, ಹಲ್ಲೆ ಮಾಡಿ, ಜಾತಿ ನಿಂದನೆ ಮಾಡಿರುವ ವಿಚಾರವನ್ನು ಪೊಲೀಸರ ಮುಂದೆ ಹೇಳಿರುತ್ತೇನೆ. ಸದರಿ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳದೇ, ಇದೇ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.